ಪಕ್ಕದಲ್ಲೇ ಇದ್ದ ಜಗ್ಗಿನಿಂದ ನೀರನ್ನು ಬಗ್ಗಿಸಿ ಕೊಟ್ಟಳು.

ನೀರು ಕುಡಿದು ಸುಧಾರಿಸಿಕೊಂಡಳು ಋತು. ಆದರೆ ಕನಸು ಕಾಡತೊಡಗಿತ್ತು.

'ಈಗ ಹೇಳು ಋತು, ನಿಂಗೆ ಏನಾಯ್ತು?' ನಿಧಾನವಾಗಿ ರಮ್ಯ ಕೇಳಿದಾಗ ತನಗೆ ಬಿದ್ದ ಕನಸನ್ನು ವಿವರಿಸಿದಳು ಋತು.

'ನಂಗ್ಯಾಕೋ ಭಯವಾಗ್ತಿದೆ ರಮ್ಯ, ಎಂದೂ ಇಲ್ಲದ ಅಮ್ಮ ಇವತ್ತು ಈ ರೀತಿ ಕನಸಿನಲ್ಲಿ ಕಾಣುವುದೆಂದರೆ' ಕಂಪಿಸುವ ಧ್ವನಿಯಲ್ಲಿ ಹೇಳಿದಳು ಋತು.

'ಅಯ್ಯೋ ಋತು, ಕನಸುಗಳಿಗೆಲ್ಲಾ ಅರ್ಥ ಹುಡುಕ್ತಾ ಹೋದ್ರೆ ನಿನ್ನ ದೇವ್ರೇ ಕಾಪಾಡ್ಬೇಕು. ಇಷ್ಟಕ್ಕೂ ಕನಸಂದ್ರೆ ಏನೇ?....ನಮ್ಮ ಅನಿಸಿಕೆಗಳು, ನಿರೀಕ್ಷೆಗಳೆಲ್ಲಾ ಸುಪ್ತಾವಸ್ಥೆಯಲ್ಲಿ ದೃಶ್ಯವಾಗಿ ಸಿನಿಮಾದಂತೆ ನಮ್ಮ ಕಣ್ಮುಂದೆ ಬರುತ್ತೆ ಅಷ್ಟೇ....ಈಗ ನಿನ್ನ ವಿಷಯಕ್ಕೆ ಬರೋದಾದ್ರೆ ನಿಮ್ಮಮ್ಮ ನಿನ್ನನ್ನು ಬಿಟ್ಟು ಹೋಗಿದ್ದು ನಿನ್ನ ಲೈಫಿನಲ್ಲಿ ದೊಡ್ಡ ಶಾಕ್. ಅದನ್ನು ನಿನ್ನ ಸುಪ್ತ ಮನಸ್ಸು ನೆನಪಿನಲ್ಲಿಟ್ಟುಕೊಂಡಿದೆ. ಈಗ ನೀನು ಹೇಮಂತನನ್ನು ಪ್ರೀತಿಸ್ತಿದ್ದಿ, ಅವ್ನನ್ನು ಮದ್ವೆಯಾಗುವ ಯೋಚನೆಯಲ್ಲಿಯೂ ಇದ್ದಿ, ಈ ಹೊತ್ತಿನಲ್ಲೇ ಬಂಗಲೆಯಲ್ಲಿ ವಿಪರೀತಗಳು ನಡೆಯುತ್ತಿವೆ, ಅವನ್ನೇ ನೆವ ಮಾಡಿ ನಿನ್ನ ಚಿಕ್ಕಮ್ಮ ನಿಮ್ಮಿಬ್ಬರ ನಡುವಿನ ಪ್ರೀತಿಯನ್ನು ಹೊಸಕಿ ಹಾಕಲು ಯತ್ನಿಸುತ್ತಿದ್ದಾರೆ, ಹೀಗಾಗಿ ಎಲ್ಲಿ ನೀನು ಹೇಮಂತನನ್ನು ತಾಯಿಯಂತೆ ಕಳೆದುಕೊಂಡು ಬಿಡ್ತಿಯೋ ಎಂಬ ಭಯ ಈಗ ನಿನ್ನ ಸುಪ್ತ ಮನಸ್ಸನ್ನು ಕಾಡ್ತಿದೆ, ಅದರ ಎಫೆಕ್ಟೇ ಈ ನಿನ್ನ ಕನಸು, ಮತ್ತೇನಿಲ್ಲ....' ರಮ್ಯ ಸಮಾಧಾನ ಮಾಡಿದಾಗ ಅವಳನ್ನೇ ಬೆರಗುಗಣ್ಣಿನಿಂದ ನೋಡಿದಳು ಋತು. ಎಷ್ಟೊಂದು ಚೆನ್ನಾಗಿ ಮಾತನಾಡುತ್ತಾಳೆ, ಎಷ್ಟು ವಿಷಯಗಳನ್ನು ತಿಳಿದುಕೊಂಡಿದ್ದಾಳೆ ಇವಳು ಎನಿಸಿತು. ಜೊತೆಜೊತೆಗೆ ರಮ್ಯ ತನ್ನೂರಿಗೆ ಹೊರಡಲಿದ್ದಾಳೆಂದು ನೆನಪಾಗಿ ಒಂಟಿತನ ಕಾಡತೊಡಗಿತು.

'ಇನ್ನಾದ್ರೂ ನೆಮ್ಮದಿಯಿಂದ ಮಲ್ಗು ಋತು, ಇನ್ನೂ ಐದು ಗಂಟೆಯಷ್ಟೇ, ಇನ್ನೊಂದೋ ಎರಡೋ ಗಂಟೆ ಮಲಗಬಹುದಲ್ಲ... ರಮ್ಯಾಳೆಂದಾಗ–

'ರಮ್ಯ, ನೀನೂ ಇವತ್ತು ನಿಮ್ಮೂರಿಗೆ ಹೊರಟು ಬಿಡ್ತಿ, ಇನ್ನು ನನಗೆಂಥಾ ನೆಮ್ಮದಿ? ಬಾಯ್ತುಂಬ ಮಾತನಾಡುತ್ತಿದ್ದ ಚಿಕ್ಕಮ್ಮನೂ ಈಗ ಸರಿಯಾಗಿ ಮಾತನಾಡ್ತಿಲ್ಲ, ಉಸಿರುಗಟ್ಟಿಸುವ ಈ ಕೋಟೆ ಬಂಗ್ಲೇಲಿ ಇನ್ನು ಹೇಗಿರ್ತೀನೋ ಗೊತ್ತಿಲ್ಲ...'

ಋತು ಭಾರವಾದ ಧ್ವನಿಯಲ್ಲಿ ಮಾತನಾಡಿದಾಗ ರಮ್ಯಾಳಿಗೂ ಬೇಸರವಾಯಿತು. ಗೆಳತಿಯ ಸದ್ಯದ ಪರಿಸ್ಥಿತಿಯನ್ನು ಯೋಚಿಸುತ್ತಲೇ ಅವಳ ಮೇಲೆ ಕರುಣೆಯುಕ್ಕಿತು.

ಅಪ್ಪಾಜಿ ಕಾಲ್ ಮಾಡುತ್ತಲೇ ಇದ್ದಾರೆ. ತಾನು ನಂದಿಗೆ ಹೋಗಲೇಬೇಕು. ಕೋಟೆಬಂಗಲೆಯಲ್ಲಿ ಎಷ್ಟು ದಿನ ಇರಲು ಸಾಧ್ಯ?....ಒಂಟಿಯಾಗಿ ಋತುವನ್ನು ಇಲ್ಲಿ ಬಿಡಲೂ ಮನಸ್ಸು ಒಪ್ಪುತ್ತಿಲ್ಲ. ಋತುವನ್ನೇ ತನ್ನೂರಿಗೆ ಕೆಲದಿನಗಳ ಮಟ್ಟಿಗೆ ಕರೆದುಕೊಂಡು ಹೋದರೆ ಹೇಗೆ?....ಅಪ್ಪಾಜಿಯೂ ಆಗಾಗ ಅವಳನ್ನೊಮ್ಮೆ ಕರೆದುಕೊಂಡು ಬರುವಂತೆ ಹೇಳುತ್ತಲೇ ಇರುತ್ತಾರೆ. ನಂದಿಯ ಸುಂದರ, ಶಾಂತ ಪರಿಸರದಲ್ಲಿ ಕೆಲವು ದಿನಗಳಿದ್ದರೆ ಋತುವಿನ ಮನಸ್ಸಿಗೂ ನೆಮ್ಮದಿಯಾಗುತ್ತದೆ. ಅಷ್ಟರಲ್ಲಿ ಕಾಲೇಜಿನ ಸರಣಿ ಕೊಲೆಗಳ ಹಂತಕ ಸಿಕ್ಕಿದನೆಂದರೆ ಹೇಮಂತನೂ ನಿರಾಳವಾಗುತ್ತಾನೆ....ಕಾಲೇಜು ಪುನರಾರಂಭವಾಗುತ್ತದೆ....ತನ್ನ ಯೋಚನೆ ಸರಿಯಾಗಿಯೇ ಇದೆಯೆನಿಸಿತು ರಮ್ಯಾಳಿಗೆ.

ಗೆಳತಿಯ ಹತ್ತಿರ ಈ ವಿಷಯವಾಗಿ ಮಾತನಾಡಿದಳು.

ಕೇಳಿ ಋತುವಿನ ಮುಖ ಅರಳಿತು. ಮರುಕ್ಷಣವೇ ಆತಂಕ ಆ ಮುಖವನ್ನು ಮುಸುಕಿತು.

'ನಾನೇನೋ ರೆಡಿ ರಮ್ಯ, ಆದ್ರೆ ಪಪ್ಪ, ಚಿಕ್ಕಮ್ಮ ನನ್ನನ್ನು ಕಳುಹಿಸಲು ಒಪ್ಪಬೇಕಲ್ಲ.'

'ಅಂಕಲ್ ಅನ್ನು ಒಪ್ಪಿಸುವ ಕೆಲಸ ನನಗಿರ್ಲಿ ಋತು, ಇನ್ನು ಆಂಟಿ....ಅಂಕಲ್ ಒಪ್ಪಿಕೊಂಡ್ರೆ ಅವ್ರು ಒಪ್ಲೇಬೇಕಲ್ಲ...'

ರಮ್ಯ ಧೈರ್ಯ ತುಂಬಿದಾಗ ಋತುವಿಗೂ ಸಮಾಧಾನವಾಯಿತು.

ಪುರುಷೋತ್ತಮರು ಪ್ರತಿ ದಿನ ಮುಂಜಾನೆ ಕೆರೆದಂಡೆಯವರೆಗೂ ಕಾಲ್ನಡಿಗೆ ಮಾಡುವ ಅಭ್ಯಾಸವಿಟ್ಟುಕೊಂಡಿದ್ದಾರೆ. ಅದೆಷ್ಟೇ ಚಳಿ ಮಳೆಯಿದ್ದರೂ ತಮ್ಮ ನಡಿಗೆಯನ್ನು ಅವರು ತಪ್ಪಿಸುವುದಿಲ್ಲ. ಸೂರ್ಯೋದಯದ ಸಮಯದಲ್ಲಿ ಅವರು ಕೆರೆದಂಡೆಯಲ್ಲಿರಬೇಕು. ಈ ಅಭ್ಯಾಸ ಮೊದಲಿನಿಂದಲೂ ನಡೆದು ಬಂದಿದೆ. ತಂದೆಯ ಈ ಅಭ್ಯಾಸದ ಕುರಿತು ಗೆಳತಿಗೆ ಹೇಳಿದಳು ಋತು.

## ಇಲ್ಲಿಯವರೆಗೆ



ಕೋಟೆ ಬಂಗಲೆಯಲ್ಲಿ ಒಂದಲ್ಲ ಒಂದು ಅಪಶಕುನ, ಅನಾಹುತಗಳು ನಡೆಯುತ್ತಲೇ ಇರುತ್ತದೆ. ಇದರಿಂದ ಹೇಮಂತ ಈ ಮನೆಗೆ ಅಳಿಯನಾಗುವುದು ಸಾಧ್ಯವಿಲ್ಲ, ಅವನನ್ನು ಮರೆತು ಬಿಡು ಎಂದು ಋತುವಿಗೆ ಕಲಾವತಿ ಹೇಳುತ್ತಾಳೆ. ಇದರಿಂದ ಋತುವಿಗೆ ಬೇಜಾರಾಗುತ್ತದೆ. ಇತ್ತ ಕಾಲೇಜು ಹಾಸ್ಟೆಲ್‌ನಲ್ಲಿ ಮತ್ತೆ ಎರಡು ಭೀಕರ ಕೊಲೆಯಾಗುತ್ತದೆ. ನರಹಂತಕನೊಬ್ಬ ಇಬ್ಬರು ಅಮಾಯಕ ಹುಡುಗರನ್ನು ಕೊಂದು ಹಾಕುತ್ತಾನೆ. ಮೊದಲೇ ಒಬ್ಬ ಹುಡುಗ ಕೊಲೆಯಾಗಿದ್ದ. ಒಟ್ಟು ಮೂರು ಕೊಲೆಗಳಿಂದಾಗಿ ಹಾಸ್ಟೆಲ್ ತಲ್ಲಣವಾಗುತ್ತದೆ. ಪ್ರಿನ್ಸಿಪಾಲ್ ಭುವನೇಶ್ವರಿ, ಡಿಟೆಕ್ಟಿವ್ ಹೇಮಂತ ಹಾಗೂ ಅಜೇಯ್ ಕುಲಕರ್ಣಿ ಕೊಲೆಯ ಹಿಂದಿನ ರಹಸ್ಯ ಕಂಡುಹಿಡಿಯಲು ಮೀಟಿಂಗ್ ಮಾಡುತ್ತಾರೆ. ಇದಾಗಿ ಋತು ಮಂಕಾಗುತ್ತಾಳೆ. ಹೇಮಂತ ಮತ್ತೆ ಸರ್‌ಪ್ರೈಸ್ ಆಗಿ ಕೋಟೆಬಂಗಲೆಗೆ ಬರುತ್ತಾನೆ. ಆತನನ್ನು ನೋಡಿ ಋತು ಗೆಲುವಾಗುತ್ತಾಳೆ. ಋತು–ಹೇಮಂತ ಬಂಗಲೆಯ ಟೆರೇಸ್ ಮೇಲೆ ಲತಾಮಂಟಪಕ್ಕೆ ಹೋಗಿ ಮಾತನಾಡುತ್ತಾರೆ.

'ಸರಿ ಬಿಡು ಹಾಗಾದ್ರೆ, ಇನ್ನೂ ಒಳ್ಳೆಯದೇ ಆಯ್ತು, ನಾವಿವತ್ತು ಅಂಕಲ್ ಜೊತೆ ವಾಕಿಂಗ್ ಹೋಗೋಣ, ಸ್ವಾಮಿ ಕಾರ್ಯ, ಸ್ವಕಾರ್ಯ ಎರಡೂ ಆದ ಹಾಗಾಗುತ್ತೆ, ಏನಂತಿ?' ಗೆಳತಿಯೆಂದಾಗ ಋತುವೂ ಒಪ್ಪಿದಳು.

ಸ್ವಲ್ಪ ಹೊತ್ತು ಋತು ಮಲಗಿದರೆ, ರಮ್ಯ ಏಕಾಂತವಾಗಿ ಪ್ರಾಣಾಯಾಮ ಮಾಡಿದಳು.

ಪುರುಷೋತ್ತಮರು ವಾಕಿಂಗ್ ಹೊರಡುವ ವೇಳೆಗೆ ಋತು, ರಮ್ಯರೂ ಕೆಳಗಿಳಿದು ಬಂದರು. ಅವರಿಬ್ಬರನ್ನು ನೋಡಿ ಆಶ್ಚರ್ಯದಿಂದ ಪುರುಷೋತ್ತಮರು ಕಣ್ಣರಳಿಸಿದರು.

'ಪಪ್ಪ, ಇವತ್ತು ನಿಮ್ಮ ಜೊತೆ ವಾಕಿಂಗ್ ಬರೋಣ ಅಂತ...'

ಮುದ್ದು ಮಗಳ ಮಾತಿಗೆ ಹಿಗ್ಗಿನಿಂದ ತಲೆಯಾಡಿಸಿದರು. ಕಲಾವತಿ ಒಳಗೇನೋ ಕೆಲಸದಲ್ಲಿದ್ದುದರಿಂದ ಇವರಿಬ್ಬರೂ ಹೊರಟಿದ್ದನ್ನು ಗಮನಿಸಲಿಲ್ಲ.

### ಕೆರೆದಂಡೆ ಮೇಲೆ ವಾಕಿಂಗ್

ಬಂಗಲೆಯ ದೊಡ್ಡ ಗೇಟನ್ನು ದಾಟಿ ಮೂವರೂ ಕೆರೆದಂಡೆಯ ಕಡೆಗೆ ಹೋಗುವ ರಸ್ತೆಯಲ್ಲಿ ಸಾಗತೊಡಗಿದ್ದರು. ಇಕ್ಕೆಲಗಳಲ್ಲೂ ದೊಡ್ಡದಾದ ಮರಗಳ ಸಾಲು ಅವರನ್ನು ಸ್ವಾಗತಿಸಿತು. ಚಳಿಗಾಲದ ದಿನಗಳಾದ್ದರಿಂದ ಮಂಜು ಇನ್ನೂ ಕರಗಿರಲಿಲ್ಲ. ಸುತ್ತಲೂ ದಟ್ಟೈಸಿರುವ ಮಂಜು ಯಾವುದೋ ಭ್ರಾಮಕ ಜಗತ್ತನ್ನು ಸೃಷ್ಟಿಸಿತ್ತು. ಚಳಿಗಾಲವಾದ್ದರಿಂದ ಸಾಕಷ್ಟು ಎಲೆಗಳು ಉದುರಿದ್ದವು. ಒಣಗಿದೆಲೆಗಳ ಚರಪರ ಸದ್ದಿನಲ್ಲಿ, ಎಲೆಗಳ ಹಾಸಿನ ಮೇಲೆ ನಡೆಯುವಾಗ ಅವರ್ಣನೀಯ ಆನಂದವಾಗತೊಡಗಿತ್ತು. ಹಕ್ಕಿಗಳಿಂಚರ ಕಿವಿಗಳನ್ನು ತುಂಬತೊಡಗಿತ್ತು. ಕುಳಿರ್ಗಾಳಿ ಬೀಸತೊಡಗಿದ್ದರೂ ಬೆಚ್ಚನೆಯ